ರಾಜ್ಯದಲ್ಲಿ ಗ್ರಂಥಾಲಯಗಳ ಕಾರ್ಯನಿರ್ವಹಣೆ.

668(767) ಶ್ರೀ ಅಂಜನಮೂರ್ತಿ (ನೆಲಮಂಗಲ): ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದಲ್ಲಿ ಎಷ್ಟು ಗ್ರಂಥಾಲಯಗಳಿವೆ; ಅವುಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆಯೆ;

ಆ) 2000-2001 ನೇ ಸಾಲಿನಲ್ಲಿ ಗ್ರಂಥಾಲಯಗಳಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಇ) ಇವುಗಳಿಗೆ ಪುಸ್ತಕಗಳ ಖರೀದಿಯಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಬಾಬು ರಾವ್ ಚವ್ವಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ ಹಾಗೂ ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು) :-

ಅ) 2776 ಗ್ರಂಥಾಲಯಗಳಿವೆ. ಇವುಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿವೆ.

ಗ್ರಂಥಾಲಯಗಳಿಗೆ ಬಿಡುಗಡೆ ಮಾಡಿರುವ ಹಣದ ವಿವರ

ಯೋಜನೆಗೆ,	ಯೋಜನೇತರ,	ಗ್ರಂಥಾಲಯ ಕರ:	ಒಟ್ಟು ಹಣ (ಲಕ್ಷ ರೂ.ಗಳಲ್ಲಿ)
571.27	1132.10	431.57	2034.94

ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿ ನಡೆದಿರುವ ಹಲವಾರು ಅವ್ಯವಹಾರಗಳೊಂದಿಗೆ, ಪುಸ್ತಕಗಳ ಖರೀದಿಯಲ್ಲಿಯೂ ಅವ್ಯವಹಾರ ನಡೆದಿರುವುದು ರಾಜ್ಯ ಲೆಕ್ಕಪತ್ರ ನಿಯಂತ್ರಕರಿಂದ ನಡೆಸಲ್ಪಟ್ಟ ವಿಶೇಷ ತನಿಖಾ ವರದಿಯಿಂದ ಕಂಡು ಬಂದಿದೆ. ಈ ವರದಿಯನ್ನು ಸರ್ಕಾರವು ಪರಿಶೀಲಿಸುತ್ತಿದೆ.

ಸ್ವಚ್ಛ ಗ್ರಾಮಗಳ ಯೋಜನೆ

669 (768) ಶ್ರೀ ಅಂಜನಮೂರ್ತಿ (ನೆಲಮಂಗಲ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಸರ್ಕಾರಿ ಜಾರಿಗೆ ತಂದಿರುವ ಸ್ವಚ್ಛಗ್ರಾಮದ ನೀತಿ ಅಡಿಯಲ್ಲಿ ರಾಜ್ಯದಲ್ಲಿ ಇದುವರೆವಿಗೂ ಎಷ್ಟು ಗ್ರಾಮಗಳು ಆಯ್ಕೆ ಆಗಿವೆ; (ಜಿಲ್ಲಾವಾರು ತಾಲ್ಲೂಕುವಾರು ಪಂಚಾಯತ್‌ವಾರು ವಿವರ ನೀಡುವುದು)

ಆ) ಸರ್ಕಾರ ನೀತಿ ಪ್ರಕಾರ ಅತಿ ಹಿಂದುಳಿದ ಪ್ರದೇಶಗಳಲ್ಲಿ ಸಾರ್ವಜನಿಕರು ಶೇವಣಿ 1 ಲಕ್ಷ ರೂ ನೀಡಲು ಮುಂದೆ ಬಾರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಯೋಜನೆಯ ಉತ್ತಮ ಅನುಷ್ಠಾನಕ್ಕಾಗಿ ಸರ್ಕಾರ ಏನು ಕಾರ್ಯಕ್ರಮ ರೂಪಿಸಲಿದೆ?